ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಿ ಈ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ

ವಿಷಯ (ರ) ಶ್ರೀನಿವಾಸಪುರ ವಿಧಾನ ಸಭಾ ಕ್ಷೇತ್ರದಲ್ಲಿ ಅಧಿಕೃತ ಮತದಾರರ ಪಟ್ಟಿಯನ್ನು ವಿಕೃತಗೊಳಿಸಿರುವ ಅಧಿಕಾರಿ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ

†**ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ)** ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳ ಪೂರ್ವದಲ್ಲಿ ಕೇಂದ್ರ ಚುನಾವಣಾ ಆಯೋಗದ ಆದೇಶದ ಮೇರೆಗೆ ಒಂದು ವೇಳಾ ಪಟ್ಟಿಯನ್ನು ಪ್ರಕಟಿಸಿ ಮತದಾನ ಪಟ್ಟಿಯ ಪರಿಷ್ಕರಣ ಕಾರ್ಯವನ್ನು ಕೈಗೊಳ್ಳಲಾಗಿತ್ತು ನನ್ನ ಮತಕ್ಷೇತ್ರದಲ್ಲಿಯೂ ಕೂಡ ಮತದಾರರ ಆಕ್ಷೇಪಣೆಗಳನ್ನು ಕೇಳಿದ ಮೇಲೆ ಮತ್ತು ಇದರ ವಿಚಾರಣೆ ಪೂರ್ಣಗೊಂಡನಂತರ ಆಖ್ಯೆರು ಮತದಾರರ ಪಟ್ಟಿಯನ್ನು ಪ್ರಕಟಣೆ ಮಾಡಿದ ಮೇಲೆ ಇದೇ ನಿಜವಾದಂಥ ಮತದಾರರ ಪಟ್ಟಿಯೆಂದು ನಂಬಿ ಅದನ್ನು ನಾವು ಆಶ್ರಯಿಸಿದ್ದವು ಆದರೆ, ಮತದಾನದ ದಿವಸ ನಮ್ಮ ಅರಿವಿಗೆ ಬಂದಿದೇನೆಂದರೆ, ಜಿಲ್ಲಾಧಿಕಾರಿಯವರ ಗಮನಕ್ಕೆ ಹೋಗಿ ಅಧಿಕೃತವಾಗಿ ಆಖ್ಯೆರುವಾದಂಥ ಮತದಾರರ ಪಟ್ಟಿ ಪ್ರಕಟಣೆಗೆಂದು ಪ್ರೆಸ್‌ಗ ಪ್ರಿಂಟ್‌ಗೆ ಹೋಗುವಂಥ ವೇಳೆಯಲ್ಲಿ ಆಯ್ದ ಕೆಲವು ಗ್ರಾಮಗಳಲ್ಲಿ ಕೆಲವು ಮತದಾರರ ಹೆಸರು ಸೇರ್ಪಡೆಯಾಗಿರುವುದರಿಂದ ಮತ್ತು ತೆಗೆದು ಹಾಕಿರುವುದರಿಂದ ಹೆಚ್ಚು ಕಡಿಮೆ ಸುಮಾರು 10 ಸಾವಿರ ಮತದಾರರ ಹೆಸರು ಪಟ್ಟಿಯಿಂದ ಬಿಡಲಾಗಿದೆ ಈ ರೀತಿಯಾದ ಅನ್ಯಾಯ ಮಾಡುವುದಕ್ಕ ಸಆಧ್ಯತೆ ಇದೆಯೇ ಎಂದು ನಾನು ಎಲ್ಲಾ ದಾಖಲೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಕಛೇರಿಯಲ್ಲಿ ವಿಚಾರಣೆ ಮಾಡಿ ನೋಡಿದೆ ಜಿಲ್ಲಾಧಿಕಾರಿಯವರ ಗಮನಕ್ಕೂ ಕೂಡ ತರದೆ ಸಹಾಯಕ ಚುನಾವಣಾ ಅಧಿಕಾರಿಯಗಿರತಕ್ಕಂಥ ಒಬ್ಬ ತಹಸೀಲ್ದಾರ್‌ರವರು ಅಧಿಕೃತ ಪಟ್ಟಿಯನ್ನು ಪೂರ್ಣವಾಗಿ ವಿಕೃತಗೊಳಿಸಿ ಆತನ ಮನಸೋ ಇಚ್ಛೆ ಮತದಾರರ ಪಟ್ಟಿಯನ್ನು ತಯಾರು ಮಾಡಿರತಕ್ಕಂಥ ಸ್ಥಿತಿಗೆ ನಾವು ತಲುಪಿದ್ದೇವೆ ಪ್ರಜಾಪ್ರಭುತ್ವದಲ್ಲಿ ಜನರ ಆಯ್ಕೆಗೆ ಬಿಡತಕ್ಕಂಥದ್ದು ಮತ್ತು ಅವರ ನಿರ್ಣಯಕ್ಕೆ ತಲ ಭಾಗತಕ್ಕಂಥದ್ದು ಬಏರೆ ಆದರೆ, ಇಂಥವರು ಅರ್ಧ ಡಜನ್ ಒಂದೊಂದು ಕ್ಷೇತ್ರದಲ್ಲಿದ್ದರೆ ಏನು ಆಗಬಹುದು ಎಂಬುದನ್ನು ತಾವೇ ಯೋಚನೆ ಮಾಡಬಹುದು ಈತ ಇದುವರೆಗೂ ಸರ್ಕಾರಿ ಸೇವೆಯಲ್ಲಿ ಮುಂದುವರಿಯುತ್ತಿದ್ದಾನೆ ಈ ಹಂತದಲ್ಲಿ ಈ ರೀತಿಯಾದ ಕೃತ್ಯವನ್ನು ಮಾಡಲು ಧೈರ್ಯ ಮಾಡಿರತಕ್ಕಂಥ ಅಧಿಕಾರಿ ಸರ್ಕಾರಿ ಸೇವೆಯಲ್ಲಿ ಮುಂದುವರಿಯುವುದಾದರೆ ಸರ್ಕಾರ ಪಾಡು ಏನು ಆಗಬಹುದು? ಮತ್ತೆ ಸರ್ಕಾರವನ್ನು ಆಶ್ರಯಿಸಿರುವ ಜನರ ಪಾಡು ಏನು ಆಗಬಹುದು? ನನ್ನ ಮತ ಕ್ಷೇತ್ರದಲ್ಲಿ ಈ ರೀತಿಯಾಗಿರತಕ್ಕಂಥದ್ದು ಬಹಳ ಗಂಭೀರ ಸ್ವರೂಪದ ಆರೋಪವಾಗಿದೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಬೇರೆ ಆದರೆ, ಇಲ್ಲಿಯವರೆಗೆ ಸಾಕಷ್ಟು ತಡವಾಗಿದೆ ಈ ವಿಷಯವನ್ನು ಈಗಾಗಲೇ ಜಿಲ್ಲಾಧಿಕಾರಿಯವರ ಗಮನಕ್ಕೆ ತಂದಿದ್ದೇನೆ ಆದರೆ, ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಮಾಡಿರತಕ್ಕಂಥ ಈ ಅಪಾದನೆ ಮೇಲ್ನೋಟಕ್ಕೆ ಸಾಬೀತು ಆಗತಕ್ಕಂಥ ವಿಷಯವಾಗಿದ್ದರೆ ಇದರ ಬಗ್ಗೆ ಜಿಲ್ಲಾಧಿಕಾರಿಯವರ ಜೊತೆ ಚರ್ಚೆ ಮಾಡಿ ಈ ಕೂಡಲೇ ಆ ಅಧಿಕಾರಿಯನ್ನು ಅಮಾನತ್ತು ಮಾಡಬೇಕು ಮತ್ತೆ ಅಮಾನತ್ತು ಬಹಳ ದಿವಸ ಮುಂದುವರಿಯಬಾರದು ಏಕೆಂದರೆ, ಇಂಥವರನ್ನು ಸರ್ಕಾರಿ ಸೇವೆಯಿಂದ ತೆಗೆಯತಕ್ಕಂಥ ಕೆಲಸ ಮಾಡಿದರೆ ಬಹುಶಃ ಮುಂದೆ ಈ ರೀತಿ ಕೆಲಸಕ್ಕೆ ಕೈ ಹಾಕಲಿಕ್ಕೆ ಸ್ವಲ್ಪ ಎಚ್ಚರಿಕೆ ಕೊಟ್ಟಂತಾಗುತ್ತದೆ ಪ್ರಜಾಪ್ರಭುತ್ವ ಇವರ ಕೈಯಲ್ಲಿ ಊರ್ಜಿತವಾಗುವ ಸ್ಥಿತಿಗೆ ನಾವು ಬರಬಾರದೆಂದು ಅತ್ಯಂತ ಕಳಕಳಿಯಿಂದ ಸರ್ಕಾರಕ್ಕೆ ನಿವೇದನೆ ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ, ಮುಜರಾಯಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಮತದಾನದ ಹಕ್ಕು ಅಂತರ್ಗತವಾದ ಒಂದು ಹಕ್ಕಾಗಿದೆ The denial of vote is a negation of democracy ಈ ಒಂದು ಕಾರಣಕ್ಕಾಗಿ ಮಾನ್ಯ ಶಾಸಕರು ಪ್ರಸ್ತಾಪ ಮಾಡಿರತಕ್ಕಂಥ ವಿಷಯಕ್ಕೆ ಸಂಪೂರ್ಣವಾದಂಥ ಸಹಮತ ಸಮ್ಮದೂ ಕೂಡ ಇದೆ ಆದರೆ, ತಮಗೆಲ್ಲಾ ಗೊತ್ತಿರತಕ್ಕಂಥ ವಿಚಾರವಾಗಿದೆ ಚುನಾವಣಾ ಆಯೋಗದಲ್ಲಿ ಸಿಬ್ಬಂದಿಗಳ ಕೊರತೆ ಇದ್ದು, ಚುನಾವಣೆ ಪ್ರಕ್ರಿಯೆಗಳು ಪ್ರಾರಂಭವಾದಂಥ ಸಂದರ್ಭದಲ್ಲಿ ಸಿಬ್ಬಂದಿಗಳನ್ನು ಎರವಲು ಸೇವೆ ಮೇಲೆ ತೆಗೆದುಕೊಂಡು ಚುನಾವಣಾ ಕೆಲಸವನ್ನು ನಿರ್ವಹಿಸುವುದಕ್ಕೆ ಅವರಿಗೆ ವಹಿಸಿರಲಾಗಿರುತ್ತದೆ ಚುನಾವಣಾ ಆಯೋಗ ಕೂಡ ಮತದಾರರ ಪಟ್ಟಿಯನ್ನು ಯಾವರೀತಿಯಾಗಿ ತಯಾರು ಮಾಡಬೇಕೆಂಬುದರ ಬಗ್ಗೆ ಜನತಾ ಪ್ರತಿನಿಧಿ ಕಾಯಿದೆ ಕೆಳಗೆ ಹಂತ ಹಂತವಾಗಿ ಸಂಪೂರ್ಣವಾದಂಥ ಮಾಹಿತಿಗಳನ್ನು ಕೂಡ ಕೊಡಲಾಗಿದೆ ಅಂದರೆ, ಇಂಥ ತಾರೀಖಿನ ದಿವಸವೇ ಎನ್ಯೂಮರೇಟ್‌ಗೆ ಹೋಗಬೇಕೆಂದು ಮತ್ತು ಇಂಥ ತಾರೀಖಿನದಿವಸವೇ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದೆ ಮತ್ತೆ ಇದು ಆದನಂತರ ಅವರಿಗೆ ಪ್ರತಿಯನ್ನೂ ಕೂಡ ಬೇಕೆಂದು ಮತ್ತು ಆನಂತರ ಅದನ್ನು ಎನ್‌ಕ್ವೈರಿ ಮಾಡಬೇಕು ಎನ್ನತಕ್ಕಂಥ ಸಂಪೂರ್ಣವಾದಂಥ ವಿಚಾರಗಳು ಪ್ರಸ್ತಾಪಸಲ್ಪಟ್ಟಿದ್ದರೂ ಕೂಡ ಬಹಳ ಆಲಕ್ಷ್ಯಕ್ಕೆ ದೂರಾಗಿ ಒಂದು ಮತ ಕ್ಷೇತ್ರವಲ್ಲದೆ ಎಲ್ಲಾ ಮತ ಕ್ಷೇತ್ರದಲ್ಲಿಯೂ ಕೂಡ ಈ ರೀತಿಯಾದಂಥ ಅನ್ಯಾಯ ಮಾರ್ಗಗಳಿಂದ ಗೆದ್ದು ಬರತಕ್ಕಂಥ ಕುತಂತ್ರ ಮತ್ತು ಹುನ್ನಾರಗಳು ನಡೆದಿರುವಂಥದ್ದನ್ನು ನಾವು ಕಂಡಿದ್ದೇವೆ ಯಾವ ಅಧಿಕಾರಿ ಈ ಕೆಲಸವನ್ನು ಮಾಡಿದ್ದಾನ,ಎ ಆತ ನಿಜವಾಗಿಯೂ ಕೂಡ ಅಧಿಕರದಲ್ಲಿ ಮುಂದುವರಿಯುವುದು ಅನರ್ಹ ಆದರೆ, ಚುನಾವಣಾ ಆಯೋಗ ಈ ಕೆಲಸವನ್ನು ಮಾಡಬೇಕು ಇದು ನಮ್ಮ ಸಂಪೂರ್ಣವಾದಂಥ ಜವಾಬ್ದಾರಿ, ಈ ಜವಾಬ್ದಾರಿಯನ್ನು ನಿರ್ವಹಣೆ ಮಾಡುವಾಗ ಆಗಿರತಕ್ಕಂಥ ಲೋಪದೋಷಗಳನ್ನು ನಾವೇ ಸರಿಪಡಿಸುತ್ತೇವೆಂದು ನೆನ್ನೆದಿವಸ ಚುನಾವಣಾ ಆಯೋಗದ ಆಯುಕ್ತರು ಆಗಿರತಕ್ಕಂಥ ಶ್ರೀ ಕೃಷ್ಣಮೂರ್ತಿಯವರು ಹೇಲಿದ್ದಾರೆ ಮತ್ತೆ ಫುಲ್‌ಪ್ರೂಫ್ ಆಗಿ ಸೋರಿಕೆ ಆಗಲಾರದಂತೆ ಮತ್ತು ತಪ್ಪಾಗದಂತೆ ಈ ಯೋಜನೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ ಈ ದಿವಸ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಆದ್ದರಿಂದ, ಆ ಅಧಿಕಾರಿಯ ಪೂರ್ವ ಹಿನ್ನಲೆ ಮತ್ತು ಆತನ ದಕ್ಷತೆ ಹಾಗೂ ಬೇರೆ ಬೇರೆ ವಿಚಾರಗಳ ಬಗ್ಗೆ ಜಿಲ್ಲಾಧಿಕಾರಿಯವರಿಂದ ಮಾಹಿತಿ ಪಡೆದುಕೊಂಡು ನಮ್ಮ ಕಾನೂನಿನ ಅನುಗುಣವಾಗಿ ಆತನ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನವು ಖಂಡಿತ ತೆಗೆದುಕೊಳ್ಳುತ್ತೇವೆ

ವಿಷಯ (ಡ) ಶಿರಹಟ್ಟಿ ತಾಲ್ಲೂಕಿನಲ್ಲಿ ವಿಪರೀತ ಮಳೆಯಿಂದ ರೈತರಿಗೆ ಆಗಿರುವ ನಷ್ಟದ ಬಗ್ಗೆ

†ಶ್ರೀ ಜಿ ಎಸ್ ಗಡ್ಡದೇವರಮಠ್ (ಶಿರಹಟ್ಟಿ) ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ತೀವ್ರ ಬರಗಾಲವನ್ನು ನಮ್ಮ ಕ್ಷೇತ್ರದ ಜನರು ಎದುರಿಸುತ್ತಿದ್ದಾರೆ ಆದರೆ, ಇತ್ತೀಚೆಗೆ ಒಳ್ಳೆಯ ಮಳೆಯಾಗಿರುವುದರಿಂದ ಬಹಳ ಆಶಾದಾಯಕರಾಗಿ ರೈತ ಚಟುವಟಿಕೆಗಳನ್ನು ನಡೆಯುತ್ತಿವೆ 20 ದಿವಸಗಳ ಹಿಂದೆ ವಿಪರೀತ ಮಳೆ ಸಂಭವಿಸಿದ್ದು ಆ ಸಂದರ್ಭದಲ್ಲಿ ನನ್ನ ಕ್ಷೇತ್ರದ ಸುಂರು ಐದಾರು ಹಳ್ಳಿಗಳ ರಐತರು ಬೆಳೆದಂಥ ವಿಶೇಷ ಬೆಳೆಗಳಾದ ಭತ ಮತ್ತು ಬಾಳೆ ಪೂರ್ಣವಾಗಿ ಲುಕ್ಸಾನ್ ಆಗಿದೆ ಹಾಗೆಯೇ ಹಡಗಲಿ ಕ್ಷೇತ್ರದ ಕೆಲವೊಂದು ಹಳ್ಳಿಗಳಲ್ಲಿಯೂ ಕೂಡ ಭತ್ತದ ಬೆಳೆ